## ಪ್ರಾರ್ಥನೆ

# ಶ್ರೀರಾಮಕೃಷ್ಣ ಪ್ರಣತಿಮಾಲಿಕಾ - ೩



**ಸ್ವೇನಾರ್ಜಿತತಪಸ್ಸಿದ್ಧಿಗ್ರಾಹಯೋಗ್ಯನರಾನ್ ಪ್ರತಿ ।**
**ಅಭೀಪ್ಸಾಂ ಯಃ ಕರೋತಿ ಸ್ಮ ತಸ್ಮೈ ಚಿಂತಾವತೇ ನಮಃ ॥ ೧೩ ॥**

ತಪಸ್ಸಿನಿಂದ ಸ್ವತಃ ಗಳಿಸಿದ ಸಿದ್ಧಿಗಳನ್ನು ಪಡೆಯುವ ಯೋಗ್ಯ ವ್ಯಕ್ತಿಗಳಿಗಾಗಿ ಹಂಬಲಿಸುವ, ಸುಚಿಂತಕರಾದ ಶ್ರೀರಾಮಕೃಷ್ಣರನ್ನು ನಮಿಸುತ್ತೇನೆ.

**ಆಜನ್ಮಶುದ್ಧಸತ್ತ್ವಾನಾಂ ನರೇಂದ್ರಾದ್ಯಧಿಕಾರಿಣಾಮ್ ।**
**ಆಗಮಾನ್ಮೋದಮಾನಂ ಚ ವಂದೇ ತದನುಶಾಸನೇ ॥ ೧೪ ॥**

ಪರಿಶುದ್ಧ ಸತ್ತ್ವದಿಂದ ಕೂಡಿದ ನರೇಂದ್ರರೇ ಮೊದಲಾದ ಆಧ್ಯಾತ್ಮಿಕ ಅಧಿಕಾರಿಗಳ ಆಗಮನ ಹಾಗೂ ಅವರ ಬೋಧನೆಗಳಲ್ಲಿ ಜೀವನವಿಡೀ ಆನಂದವನ್ನು ಕಂಡ ಶ್ರೀರಾಮಕೃಷ್ಣರನ್ನು ವಂದಿಸುತ್ತೇನೆ.

**ಕಾಮಿನೀಕಾಂಚನತ್ಯಾಗಃ ಸರ್ವೈರಪಿ ಮುಮುಕ್ಷುಭಿಃ ।**
**ಕರ್ತವ್ಯೋ ಹಿ ಪ್ರಯತ್ನೇನೇತ್ಯುಕ್ತವಂತಂ ನತೋಽಸ್ಮ್ಯಹಮ್ ॥ ೧೫ ॥**

ಮುಮುಕ್ಷುಗಳೆಲ್ಲರೂ ಕಾಮಿನೀಕಾಂಚನ ತ್ಯಾಗವನ್ನು ಪ್ರಯತ್ನಪೂರ್ವಕವಾಗಿ ಮಾಡಲೇಬೇಕು ಎಂದು ಬೋಧಿಸಿದ ಶ್ರೀರಾಮಕೃಷ್ಣರನ್ನು ನಾನು ನಮಿಸುತ್ತೇನೆ.

**ಕ್ಲಿಷ್ಟೋ ದುರವಗಾಹ್ಯಶ್ಚ ವೇದವೇದಾಂತಮಧ್ಯಗಃ ।**
**ಉಪದೇಶೋ ನಿರಾಯಾಸಃ ಕ್ರಿಯತೇ ಯೇನ ತೇ ನಮಃ ॥ ೧೬ ॥**

ಕ್ಲಿಷ್ಟವೂ ಸುಲಭಗ್ರಾಹ್ಯವಲ್ಲದುದೂ ಆದ ವೇದ, ವೇದಾಂತಗಳ ಉಪದೇಶಗಳನ್ನು ಸರಳವಾಗಿ ತಿಳಿಸಿಕೊಟ್ಟ ಶ್ರೀರಾಮಕೃಷ್ಣರಿಗೆ ನನ್ನ ನಮನಗಳು.

**ಶ್ರೇಯಸೇ ಸರ್ವಶಿಷ್ಯಾಣಾಂ ಸ್ವಪದೇಽರ್ಪಿತಚೇತಸಾಮ್ ।**
**ತೇಷಾಂ ಪಾಪಾನಿ ಸರ್ವಾಣಿ ಕರ್ಷಯಂತಂ ನಮಾಮ್ಯಹಮ್ ॥೧೭॥**

ತಮ್ಮೆಲ್ಲ ಅಂತಃಕರಣಗಳೊಂದಿಗೆ ತಮ್ಮನ್ನು ಶ್ರೀರಾಮಕೃಷ್ಣರ ಪದತಲದಲ್ಲಿ ಅರ್ಪಿಸಿದ ಶಿಷ್ಯರೆಲ್ಲರ ಶ್ರೇಯಸ್ಸಿಗೆ ಹಾಗೂ ಅವರ ಪಾಪನಾಶಕ್ಕೆ ಶ್ರಮಿಸಿದ ಶ್ರೀರಾಮಕೃಷ್ಣರಿಗೆ ನಮನಗಳು.

**ಸದಾನಂದೇ ಸ್ಥಿತಂ ವಂದೇ ದೇಹೇ ದಗ್ಧೇಽಪಿ ದಾರುಣೇ ।**
**ವ್ಯಥನೇ ಯತಿರಾಜಂ ತಂ ಸರ್ವಭೂತಹಿತಂಕರಮ್॥ ೧೮ ॥**

ಅತ್ಯಂತ ಕಷ್ಟಕರವಾದ ದೈಹಿಕ ಅನಾರೋಗ್ಯವಿದ್ದೂ ಸದಾ ಆನಂದದಲ್ಲೇ ನೆಲೆಸಿದ್ದ, ಎಲ್ಲ ಜೀವಿಗಳ ಹಿತವನ್ನೇ ಬಯಸುವ ಯತಿರಾಜರಾದ ಶ್ರೀರಾಮಕೃಷ್ಣರನ್ನು ವಂದಿಸುತ್ತೇನೆ.

**ಸಮಾಪ್ಯ ಸರ್ವಕರ್ಮಾಣಿ ನರೇಂದ್ರೇ ಸನ್ನಿಧಾಯ ಚ ।**
**ಸ್ವಶಕ್ತಿಂ ಲೀಲಯಾ ದೇಹಂ ತ್ಯಕ್ತವಂತಂ ನಮಾಮ್ಯಹಮ್ ॥ ೧೯ ॥**

ತಮ್ಮ ಎಲ್ಲ ಕರ್ಮಗಳನ್ನೂ ಮುಗಿಸಿದ ಬಳಿಕ, ತಮ್ಮೆಲ್ಲ ದಿವ್ಯ ಶಕ್ತಿಗಳನ್ನು ನರೇಂದ್ರನಿಗೆ ಸಮರ್ಪಿಸಿ, ಅತ್ಯಂತ ಸಹಜವಾಗಿ ದೇಹತ್ಯಾಗ ಮಾಡಿದ ಶ್ರೀರಾಮಕೃಷ್ಣ ಪರಮಹಂಸರನ್ನು ನಮಿಸುತ್ತೇನೆ.

— ಸ್ವಾಮಿ ಹರ್ಷಾನಂದ

## ಸೂಕ್ತಿಪ್ರಭ



ಜೀವನದ ಯಾವ ಅವಸ್ಥೆಯಲ್ಲಿ ನೀನಿರುವೆಯೋ, ಅಲ್ಲೇ ಇದ್ದುಕೊಂಡು ನಿನ್ನ ಕಾರ್ಯವನ್ನು ಸ್ಥಿರತೆಯಿಂದ ನಿರಂತರ ಮಾಡುತ್ತ ಹೋಗು. ಜೀವನ, ಸಂಪತ್ತು, ಅಧಿಕಾರ ಇವು ಮಾನವನನ್ನು ಗುಲಾಮನನ್ನಾಗಿಸುವುದಿಲ್ಲ; ಜೀವನ, ಸಂಪತ್ತು, ಅಧಿಕಾರ ಇವುಗಳಲ್ಲಿ ಆಸಕ್ತನಾಗಿರುವುದೇ ಅವನನ್ನು ಗುಲಾಮನನ್ನಾಗಿಸುವುದು.

— ಭಗವಾನ್ ಬುದ್ಧ

ದೃಶ್ಯವಾದುದನ್ನು ಅದೃಶ್ಯವಾದದ್ದಾಗಿ ಪರಿವರ್ತಿಸಿ, ಪ್ರತಿಯೊಂದನ್ನೂ ಬ್ರಹ್ಮವೆಂದೇ ಕಂಡುಕೊಳ್ಳಬೇಕು. ಹೀಗೆ ಬುದ್ಧಿಶಾಲಿಯಾದವನು ಶುದ್ಧ ಚೈತನ್ಯದ ಸಾರದಿಂದ ತನ್ನ ಮನಸ್ಸನ್ನು ತುಂಬಿಕೊಂಡು, ಅನಂತ ಆನಂದದಲ್ಲಿ ನೆಲೆಸಬೇಕು.



— ಶ್ರೀ ಶಂಕರಾಚಾರ್ಯ

ಯಾರು ನಿಜವಾಗಿಯೂ ಭಗವಂತನ ಪಾದಗಳಲ್ಲಿ ಶರಣಾಗಿರುವನೋ ಅವನು ತನ್ನ ಭವಿಷ್ಯದ ಬಗ್ಗೆ ಯಾವ ಯೋಚನೆಯನ್ನೂ ಇಟ್ಟುಕೊಳ್ಳಬಾರದು; ಅದು ಭಗವಂತನಿಗೇ ಸೇರಿದುದು. ಆ ವಿಚಾರವಾಗಿ ಅತ್ಯಲ್ಪ ಆತಂಕವಿದ್ದರೂ ಅದು ಶರಣಾಗತಿಯಲ್ಲಿರುವ ಆಷಾಢಭೂತಿತನವನ್ನು ತೋರಿಸುತ್ತದೆ.



— ಶ್ರೀ ರಾಮಾನುಜ